ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 74/2023**

ಪ್ರ.ವ.ಬೋ.ತಾಃ 29-10-2025

ಚಾಸಾಃ 3 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಪುಷ್ಪಲತ |
| ತಂದೆ/ಗಂಡನ ಹೆಸರು | ಟಿ.ನಾಗರಾಜ್ |
| ವಯಸ್ಸು | 42 ವರ್ಷ |
| ವೃತ್ತಿ | ಟೈಲರ್ ಕೆಲಸ |
| ವಾಸ | ಬ್ಯಾಲ್ಯ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

1 ನೇ ಆರೋಪಿ ನನ್ನ ಗಂಡ. ಚಾಸಾ.2 ರವರು ನನ್ನ ಅತ್ತೆ. ಚಾಸಾ.2 ರವರು ನಮ್ಮ ಊರಿನಲ್ಲಿ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಚಾಸಾ.2 ರವರ ಹೆಸರಿನಲ್ಲಿ ಯಾವ ವರ್ಷದಲ್ಲಿ ಸರ್ಕಾರದಿಂದ ಮನೆ ಮಂಜೂರಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಚಾಸಾ.2 ರವರಿಗೆ ಆರೋಗ್ಯ ಸರಿಇಲ್ಲದೇ ಇರುವ ಕಾರಣ 2 ನೇ ಆರೋಪಿ ನಮ್ಮನ್ನು ಕರೆಸಿದ್ದರು. 1 ನೇ ಆರೋಪಿ ಬ್ಯಾಲ್ಯ ಪಂಚಾಯಿತಿಯಲ್ಲಿ ಬಿಕ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ಚಾಸಾ.2 ರವರು ತಾನು ವಾಸವಾಗಿದ್ದ ಮನೆ ಬಿದ್ದು ಹೋಗಿದ್ದ ಸಂಬಂಧ ಹೊಸದಾಗಿ ಮನೆ ಕಟ್ಟಿಕೊಳ್ಳಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದರಂತೆ ಚಾಸಾ.2 ರವರಿಗೆ 2017–18 ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮನೆ ನಿರ್ಮಿಸಲು ಹಣ ಮಂಜೂರಾಗಿತ್ತು ಎಂದರೆ ಸರಿ. ಆ ಹಣ ಚಾಸಾ.2 ರವರ ಖಾತೆಗೆ ಹಂತ ಹಂತವಾಗಿ ಜಮಾ ಆಗಿದ್ದು, ಅದರಂತೆ ಚಾಸಾ.2 ರವರು ಮನೆ ಕಟ್ಟಿಕೊಂಡಿದ್ದೆ ಎಂದರೆ ಸರಿ.

**<u>ಪಾಟೀ ಸವಾಲುಃ</u>– 2 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಆರ್.ಆರ್. ವಕೀಲರಿಂದಃ–**

ಚಾಸಾ.2 ರವರಗೆ ಮೂರು ಜನ ಮಕ್ಕಳುಗಳು ಎಂದರೆ ಸರಿ. ಅವರುಗಳು ಕಳೆದ 25 ವರ್ಷಗಳಿಂದಲೂ ಸಹ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ಚಾಸಾ.2 ರವರು ತನ್ನ ಮೂರು ಜನ ಗಂಡು ಮಕ್ಕಳುಗಳಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ಚಾಸಾ.2 ರವರ ಮನೆ ಹಳೆಯ ಮನೆಯಾಗಿದ್ದು, ಅದು ಬಿದ್ದು ಹೋಗಿತ್ತು. ಚಾಸಾ.2 ರವರಿಗೆ ಯಾವುದೇ ಆದಾಯದ ಮೂಲಗಳಿಲ್ಲ. ಆ ಕಾರಣ ಚಾಸಾ.2 ರವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಅದರಂತೆ ಹಣ ಮಂಜೂರಾಗಿತ್ತು ಎಂದರೆ ಸರಿ. ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿತ್ತು ಮತ್ತು ಎಷ್ಟು ಹಣವನ್ನು ತೆಗೆದುಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ದಿನ ಚಾಸಾ.2 ರವರಿಗೆ ಆರೋಗ್ಯ ಸರಿ ಇಲ್ಲದೆ ಎದ್ದು ಓಡಾಡಲು

ಆಗದೇ ಇದ್ದ ಕಾರಣ ಸರ್ಕಾರದವರು ನನ್ನ ಫೋಟೋವನ್ನು ತೆಗೆದುಕೊಂಡು ಹೋದರು. ಸರ್ಕಾರಿದಿಂದ ನನ್ನ ಹೆಸರಿಗೆ ಯಾವುದೇ ಮನೆ ಮಂಜೂರಾಗಿರುವುದಿಲ್ಲ.

**ಪಾಟೀ ಸವಾಲುಃ– 1 ನೇ ಆರೋಪಿತರ ಪರವಾಗಿ ಶ್ರೀ. ಆರ್.ಆರ್. ವಕೀಲರಿಂದಃ–**

2013–14 ನೇ ಸಾಲಿನಲ್ಲಿ ಚಾಸಾ.2 ರವರಿಗೆ ಮನೆ ಮರು ಮಂಜೂರಾಗಿದ್ದು, ಆ ಅವಧಿಯಲ್ಲಿ 2 ನೇ ಆರೋಪಿ ಆ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿರಲಿಲ್ಲ ಎಂದರೆ ಸರಿ. ಅದೇ ರೀತಿ 2017–18 ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮನೆ ಮಂಜೂರಾದ ಸಮಯದಲ್ಲಿಯೂ ಸಹ 2 ನೇ ಆರೋಪಿ ಆ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿರಲಿಲ್ಲ ಎಂದರೆ ಸರಿ.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ